# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 153(160) |
| ಉತ್ತರಿಸಬೇಕಾದ ದಿನಾಂಕ : | 05.07.2023 |
| ಉತ್ತರಿಸಬೇಕಾದ ಸಚಿವರು : | ಕಂದಾಯ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆಗೆ ಎಂಬ ಯೋಜನೆಯಿಂದ ಎಷ್ಟು ಫಲಾನುಭವಿಗಳಿಗೆ ಲಾಭವಾಗಿದೆ ; (ವಿವರ ನೀಡುವುದು) | ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆಗೆ ಎಂಬ ಯೋಜನೆಯಿಂದ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 38,406 ಹಾಗೂ ಯಾದಗಿರಿ ಜಿಲ್ಲೆಯಲ್ಲಿ 12,050 ಫಲಾನುಭವಿಗಳಿಗೆ ಲಾಭವಾಗಿರುತ್ತದೆ. ಈ ಕಾರ್ಯಕ್ರಮದಲ್ಲಿ ವಿವಿಧ ಯೋಜನೆಯಡಿಯಲ್ಲಿ ಒಟ್ಟು ಸುಮಾರು ಕಲ್ಬುರ್ಗಿ ಜಿಲ್ಲೆಯಿಂದ 37,651 ಅರ್ಜಿಗಳು ಸ್ವೀಕೃತವಾಗಿದ್ದು ಎಲ್ಲಾ ಅರ್ಜಿಗಳು ವಿಲೇವಾರಿಯಾಗಿರುತ್ತದೆ. ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಒಟ್ಟು ಸುಮಾರು 9,262 ಅರ್ಜಿಗಳು ಸ್ವೀಕೃತವಾಗಿದ್ದು ಎಲ್ಲಾ ಅರ್ಜಿಗಳು ವಿಲಾವಾರಿಯಾಗಿರುತ್ತದೆ. |
| ( ಆ) | ಯಾವ ಯಾವ ಉದ್ದೇಶಕ್ಕಾಗಿ ಎಷ್ಟು ಅರ್ಜಿಗಳು ಬಂದಿವೆ ; ಇವುಗಳಲ್ಲಿ ಎಷ್ಟು ಅರ್ಜಿಗಳು ಇತ್ಯರ್ಥವಾಗಿವೆ ; (ವಿವರ ನೀಡುವುದು) | ಅನುಬಂಧ ಲಗತ್ತಿಸಿದೆ. |
| (ಇ) | ಜಿಲ್ಲಾಧಿಕಾರಿ ನಡೆ ಹಳ್ಳಿಯ ಕಡೆಗೆ ಎಂಬ ಕಾರ್ಯಕ್ರಮಕ್ಕೆ ವೆಚ್ಚವಾದ ಹಣವೆಷ್ಟು; ಈ ವೆಚ್ಚವನ್ನು ಯಾವ ಯೋಜನೆಯಿಂದ ಬಳಕೆ ಮಾಡಲಾಗುತ್ತಿದೆ; ಒಂದು ಕಾರ್ಯಕ್ರಮಕ್ಕೆ ತಗಲುವ ವೆಚ್ಚ ಎಷ್ಟು ? (ವಿವರ ನೀಡುವುದು) | ಕಂದಾಯ ಸಚಿವರು ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಅಭಿಯಾನದಲ್ಲಿ / ಕಾರ್ಯಕ್ರಮದಲ್ಲಿ ಭಾಗವಹಿಸಲು ಆಯ್ಕೆ ಮಾಡಿಕೊಳ್ಳುವ ತೀರಾ ಹಿಂದುಳಿದಿರುವ ಹಳ್ಳಿ / ಗ್ರಾಮಗಳಲ್ಲಿನ ಮೂಲಭೂತ ಸೌಕರ್ಯಗಳಾದ ರಸ್ತೆ, ಸಾರಿಗೆ, ಕುಡಿಯುವ ನೀರು, ಆರೋಗ್ಯ ಕೇಂದ್ರಗಳು, ಅಂಗನವಾಡಿ, ಸ್ಮಶಾನ, ಗುಡಿಸಲು ವಾಸಿಗಳಿಗೆ ಮನೆ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಶಾಲಾ ಮತ್ತು ಅಂಗನವಾಡಿ ದುರಸ್ತಿ, ಹಾಗೂ ಇನ್ನಿತರೇ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಲುವಾಗಿ 2022-23ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ:2053-00-093-1-01 Deputy Commissioners ಸಾಮಾನ್ಯ ವೆಚ್ಚಗಳು-051ರಡಿ ರೂ.1500.00 ಲಕ್ಷಗಳನ್ನು ಹೆಚ್ಚುವರಿಯಾಗಿ ಒದಗಿಸಲಾಗಿರುತ್ತದೆ.<br><br>ಮುಂದುವರೆದು, ಕಂದಾಯ ಸಚಿವರು ಭೇಟಿ ನೀಡಿರುವ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಗ್ರಾಮಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಕಂಇ 133 ಸಮಿತಿ 2022 ಆದೇಶದನ್ವಯ ಬಿಡುಗಡೆಗೊಂಡ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿರುತ್ತದೆ |

ಸಂಖ್ಯೆ: ಕಂಇ 119 ಸಮಿತಿ 2023

(ಕೃಷ್ಣ ಭೈರೇಗೌಡ)

ಕಂದಾಯ ಸಚಿವರು

# ಅನುಬಂಧ

ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮದ ಈ ಕೆಳಕಂಡ ಯೋಜನೆಗಳಲ್ಲಿ ಸ್ವೀಕೃತ ಮತ್ತು ಇತ್ಯರ್ಥ ಅರ್ಜಿಗಳ ವಿವರ:--

**ಕಲಬುರಗಿ ಜಿಲ್ಲೆ:**

| ಕ್ರ.ಸಂ | ಯೋಜನೆಯ ವಿವರ | ಸ್ವೀಕೃತ ಅರ್ಜಿಗಳು | ಇತ್ಯರ್ಥ ಅರ್ಜಿಗಳು |
|---|---|---|---|
| 1 | ಸಂಧ್ಯಾ ಸುರಕ್ಷಾ ಯೋಜನೆ | 1846 | 1846 |
| 2 | ವೃದ್ಧಾಪ್ಯ ವೇತನ ಯೋಜನೆ | 1019 | 1019 |
| 3 | ನಿರ್ಗತಿಕ ವಿಧಾವ ವೇತನ ಯೋಜನೆ | 683 | 683 |
| 4 | ಅಂಗವಿಕಲರ ವೇತನ ಯೋಜನೆ | 220 | 220 |
| 5 | ಪಹಣಿ ತಿದ್ದುಪಡಿ ಯೋಜನೆ | 667 | 667 |
| 6 | ವಾಸಸ್ಥಳ ಸಂಬಂಧ | 10 | 10 |
| 7 | ಪೌತಿ ಖಾತೆಯ ಸಂಬಂಧ | 472 | 472 |
| 8 | ಆಧಾರ ತಿದ್ದುಪಡಿ ಸಂಬಂಧ | 107 | 107 |
| 9 | ಇತರೆ ವಿಷಯಗಳು | 28,895 | 28,895 |
| 10 | ಇತರೆ ಇಲಾಖೆಗೆ ಸಂಬಂಧಿಸಿದ ಅರ್ಜಿಗಳು | 3732 | 3732 |
| 11 | 764 ಆಯುಷ್ಮಾನ ಕಾರ್ಡ ವಿತರಿಸಲಾಗಿದೆ | | |

**ಯಾದಗಿರಿ ಜಿಲ್ಲೆ**

| ಕ್ರ.ಸಂ | ಯೋಜನೆಯ ವಿವರ | ಸ್ವೀಕೃತ ಅರ್ಜಿಗಳು | ಇತ್ಯರ್ಥ ಅರ್ಜಿಗಳು |
|---|---|---|---|
| 1 | ಸಂಧ್ಯಾ ಸುರಕ್ಷಾ ಯೋಜನೆ | **674** | **674** |
| 2 | ಪಹಣಿ ತಿದ್ದುಪಡಿ ಯೋಜನೆ | 991 | 991 |
| 3 | ಸ್ಮಶಾನ ಭೂಮಿ ಸಲುವಾಗಿ | 93 | 93 |
| 4 | ಪಡಿತರ ಚೀಟಿ | 1169 | 1169 |
| 5 | ಆಧಾರ ತಿದ್ದುಪಡಿ ಸಂಬಂಧ | 199 | 199 |
| 6 | ನಿರ್ಗತಿಕ ವಿಧಾವ ವೇತನ ಯೋಜನೆ | 373 | 373 |
| 7 | ಅಂಗವಿಕಲರ ವೇತನ ಯೋಜನೆ | 173 | 173 |
| 8 | ಇತರೆ ಇಲಾಖೆಗೆ ಸಂಬಂಧಿಸಿದ ಅರ್ಜಿಗಳು | 4807 | 4807 |
| 9 | ವೃದ್ಧಾಪ್ಯ ವೇತನ ಯೋಜನೆ | 476 | 476 |
| 10 | ಪೌತಿ ಖಾತೆಯ ಸಂಬಂಧ | 307 | 307 |